# ಶ್ರೀ ಗವಿಮಠ ಇತಿಹಾಸ

ಕ್ರಿ. ಪೂ. 273 ರ ಅಶೋಕ ಚಕ್ರವರ್ತಿಯ ಕಾಲದಿಂದ ಕೊಪ್ಪಳ ನಾಡಿನ ಚರಿತ್ರೆ ಪ್ರಾರಂಭವಾದರೂ ಕೊಪ್ಪಳ ಗವಿಮಠ, ಮಳೆಮಲ್ಲೇಶ್ವರನ ಬೆಟ್ಟದ ಮೇಲೆ ಶಿಲಾಯುಗದ ವಾಸಿಸುತ್ತಿದ್ದರು ಎನ್ನುವುದಕ್ಕೆ ಶಿಲಾಯುಗದ ಅವಶೇಷಗಳು, ಗವಿಶಿಲ್ಪಗಳು, ರೇಖಾ ಚಿತ್ರಗಳು ದೊರಕುತ್ತದೆ. ಇದೇ ಕೊಪ್ಪಳದ ಪೂರ್ವಕ್ಕಿರುವ ಬೆಟ್ಟದ ಮೇಲೆ ಇರುವುದೇ ಶ್ರೀ ಗವಿಮಠ.

ಶ್ರೀ ಗವಿಮಠಕ್ಕೆ ಸಾವಿರ ವರ್ಷಗಳ ಲಿಖಿತ ಇತಿಹಾಸವಿದೆ. ಉತ್ತರ ಭಾರತದಿಂದ ರುದ್ರಮುನಿ ಶಿವಯೋಗಿಗಳು, ದಕ್ಷಿಣದ ಹಂಪೆ ಮಾರ್ಗವಾಗಿ ಕೊಪ್ಪಳದ ಬೆಟ್ಟಕ್ಕೆ ದಯಮಾಡಿಸಿ ಅಲ್ಲಿರುವ ಗವಿಗಳು ಅವರ ತಪಸ್ಸಿನ ತಾಣಗಳಾದವು. ಅವರ ತಪಸ್ಸಿನ ಜ್ಞಾನದ ಕಿರಣವೆ ಗವಿಮಠವೆಂದು ಖ್ಯಾತಿ ಪಡೆಯಿತು. ಮಸ್ಕಿಯ ಶರಣ ಹೋಳಿ ಹಂಪಯ್ಯನು ವ್ಯಾಪಾರ ಮಾಡುತ್ತಾ ಕೊಪ್ಪಳಕ್ಕೆ ರುದ್ರಮುನಿ ಶಿವಯೋಗಿಗಳ ದರ್ಶನದಿಂದ ಪಾದೋದಕ ಪ್ರಸಾದಗಳನ್ನು ಪಡೆದು ಪುನಿತನಾಗಿ ಗುಹೆಯ ಮುಂದಿನ ಭಾಗವನ್ನು ಕಟ್ಟಿಸಿದನೆಂದು ಶ್ರೀಮಠದಲ್ಲಿರುವ ಶಾಸನದಿಂದ ತಿಳಿಯುತ್ತದೆ.

ಅಂದಿನಿಂದ ಇಂದಿನವರೆಗೂ 18 ಶಿವಯೋಗಿಗಳ ಪರಂಪರೆಯಿದ್ದು ನಾಡಿನ ಜನರಿಗೆ ಕಾಯಕ ದಾಸೋಹದ ಮೂಲಕ ಜ್ಞಾನವನ್ನು ನೀಡಿ ಸನ್ಮಾರ್ಗದಲ್ಲಿ ಮುನ್ನೆಡೆಸಿದ್ದಾರೆ. ಶ್ರೀ ಗವಿಮಠದ ಮತ್ತೊಂದು ವೈಶಿಷ್ಟ್ಯವೆಂದರೆ ಶ್ರೀ ಗವಿಮಠದ ಪರಂಪರೆಯಲ್ಲಿ ಬಂದಿರುವ ಎಲ್ಲಾ ಪೂಜ್ಯರು ಆಯುರ್ವೇದ ಚಿಕಿತ್ಸಾಪದ್ಧತಿಯಲ್ಲಿ ಪ್ರಾವಿತ್ಯತೆಯನ್ನು ಪಡೆದು ಬಡರೋಗಿಗಳ ಪಾಲಿನ ಧನ್ವಂತರಿಗಳಾಗಿದ್ದರು. ಹೀಗಾಗಿ ಇಂದು ಶ್ರೀ ಗವಿಸಿದ್ದೇಶ್ವರ ಆಯುರ್ವೇದ ಆಸ್ಪತ್ರೆ ಹಾಗೂ ಕಾಲೇಜ ಶ್ರೀ ಗವಿಮಠದ ಅಡಿಯಲ್ಲಿ ರೋಗಿಗಳ ಸೇವೆಗೆ ಹೆಸರುವಾಸಿಯಾಗಿದೆ. ಅಷ್ಟೆ ಅಲ್ಲ ಈ ಭಾಗದ 2000 ಬಡ ವಿದ್ಯಾರ್ಥಿಗಳ ಉಚಿತ ವಸತಿ ಹಾಗೂ ಪ್ರಸಾದ ನಿಲಯದ ಅಟ್ಟದ ನಿರ್ಮಾಣ ಮುಗಿಯುತ್ತಾ ಬಂದಿದ್ದು ಸಧ್ಯ ಒಂದು ಸಾವಿರ ಬಡ ವಿದ್ಯಾರ್ಥಿಗಳು ಈ ವಸತಿ ನಿಲಯದ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಶ್ರೀ ಮಠದಲ್ಲಿ ಅಸ್ಪೃಶ್ಯತೆಗೆ ಸ್ಥಾನವಿಲ್ಲ ಎಲ್ಲ ಧರ್ಮಿಯರು ಜಾತಿಜನಾಂಗಗಳ ಭಕ್ತರಿಗಾಗಿ ಮುಕ್ತ ಪ್ರವೇಶವಿರುವುದು ಶ್ರೀಮಠದ ವೈಶಿಷ್ಟ್ಯ. ಜಾತಿ ಮತಗಳಿಗೆ ಆಧ್ಯತೆ ನೀಡದೆ ಮಾನವಿಯತೆಗೆ ಮಹತ್ವ ನೀಡಿದೆ. ಧಾರ್ಮಿಕ ಸಾಮರಸ್ಯ ಹಾಗೂ ಭಾವೈಕ್ಯತೆಗೆ ಶ್ರೀಗವಿಮಠ ಸಾಕ್ಷಿಯಾಗಿದೆ.

ಈ ಭವ್ಯ ಪರಂಪರೆಯನ್ನು ಹೊಂದಿರುವ ಶ್ರೀ ಗವಿಸಿದ್ಧೇಶ್ವರ ಮಹೋತ್ಸವ ಪ್ರತಿ ವರ್ಷ ಪುಷ್ಯ ಬಹುಳ ಬಿದಗಿಯಂದು (ಜನೆವರಿ ತಿಂಗಳಲ್ಲಿ) ಜರಗುವುದು. ಶ್ರೀಮಠದ ಪರಂಪರೆಯಲ್ಲಿ ಬಂದ ಶ್ರೀ ಗವಿಸಿದ್ಧೇಶ್ವರರು, ಸಿದ್ಧಪುರುಷರು ಭಕ್ತರ ಪಾಲಿನ ಕಾಮಧೇನುವಾಗಿದ್ದರು. ಇವರ ಕರ್ತೃತ್ವ ಶಕ್ತಿಯಿಂದ ಶ್ರೀ ಗವಿಮಠ  ಪ್ರಸಿದ್ಧಿಯನ್ನು ಪಡೆಯಿತು. ಇವರು ಗುರುವಿನ ಅಗಲುವಿಕೆಯ ಅನುತಾಪವನ್ನು ಸಹಿಸದೆ ಕ್ರಿ.ಶ 1813 ರಲ್ಲಿ ಜೀವಂತ ಸಮಾಧಿ ಗೈದರು. ಅಂದಿನಿಂದ ಇಂದಿನವರೆಗೆ ಜಾತ್ರಾಮಹೋತ್ಸವ ಜರಗುತ್ತಾ ಬಂದಿದೆ. ರಥೋತ್ಸವ ನೆಡೆಯುವ ದಿನ ಸುಮಾರು 5 ಲಕ್ಷ ಜನ ಭಕ್ತರು ಸಾಕ್ಷಿಯಾಗಿರುತ್ತಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆಯುವ ಜಾತ್ರಾ ಮಹೋತ್ಸವ ದಕ್ಷಿಣ ಭಾರತದಲ್ಲಿ ಇದೊಂದೆ. ಬಾಬಾ ತಾಮದೇವ ಈ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಹರಿದ್ವಾರದ ಕುಂಬ ಮೇಳದ ನಂತರ ಇಷ್ಟೊಂದು ಜನರನ್ನು ಈ ಜಾತ್ರಾ ಮಹೋತ್ಸವದಲ್ಲಿ ಕಾಣುತ್ತಿದ್ದೇನೆ. ಇದು ದಕ್ಷಿಣ ಭಾರತದ ಕುಂಬ ಮೇಳ ಎಂದು ಉದ್ಧರಿಸಿದ್ದಾರೆ.